ಪ್ರತಿದಿನವೂ ಕೆನೆ ತೆಗೆದ ಹಾಲನ್ನು ಒಂದು ಲೋಟ ಕುಡಿಯಿರಿ. ಬಿಪಿ ನಿಯಂತ್ರಣಕ್ಕೆ ಬರುವಲ್ಲಿ ಇದು ಸಹಕಾರಿ.

# ಗುಣಮಟ್ಟದ ಉತ್ಪನ್ನಕ್ಕೆ ಮನ್ನಣೆಯ ಗರಿ

**ವೈವಿಧ್ಯಮಯ ಉತ್ಪನ್ನಗಳ ನಡುವಣ ಸ್ಪರ್ಧೆಯಲ್ಲೂ ಗುಣಮಟ್ಟವನ್ನು ಕಾಪಾಡಿಕೊಂಡು ಬರುವುದು ಸುಲಭದ ಮಾತಲ್ಲ. ಗುಣಮಟ್ಟದ ಮೂಲಕ ಗ್ರಾಹಕರ ವಿಶ್ವಾಸ ಗಳಿಸಿದ ಸಂಸ್ಥೆಯ ಯಶೋಗಾಥೆ ಇದು.**



ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರಿಂದ ಟೈಮ್ಸ್ ಪ್ರಶಸ್ತಿ ಸ್ವೀಕರಿಸುತ್ತಿರುವ ಎಸ್‌ಕೆ ಸೂಪರ್ ಟಿಎಂಟಿ ಸಂಸ್ಥೆಯ ಎಂಡಿ ಪ್ರಭು ಕುಲಂದೈಸಾಮಿ, ಸ್ಥಾಪಕಾಧ್ಯಕ್ಷ ಎಸ್.ಕುಲಂದೈಸಾಮಿ.

ಇಂದು ಮಾರುಕಟ್ಟೆಯಲ್ಲಿ ತಮ್ಮದೇ ಆದ ಅನನ್ಯತೆಗಳಿರುವ ಹಲವು ಉತ್ಪನ್ನಗಳಿವೆ. ವಸ್ತುಗಳ ಈ ಮಹಾಪೂರದಲ್ಲಿ ಯಾವುದು ಉತ್ತಮ ಗುಣಮಟ್ಟದ್ದು, ಯಾವುದು ಕಳಪೆ ಎಂದು ಗುರುತಿಸುವುದು ಗ್ರಾಹಕರಿಗೆ ಸವಾಲಿನ ಕೆಲಸ. ಅದೆಷ್ಟೋ ಕಂಪೆನಿಗಳು ತಾವು ಉತ್ತಮ ವಸ್ತುಗಳನ್ನು ನೀಡುತ್ತೇವೆ ಎಂದು ಹೇಳಿಕೊಂಡರೂ ಅವುಗಳ ಗುಣಮಟ್ಟ ಹಾಗಿರುವುದಿಲ್ಲ. ಗ್ರಾಹಕರ ಹಣಕ್ಕೂ ಇದರಿಂದ ಅನ್ಯಾಯವಾಗುವುದೇ ಹೆಚ್ಚು. ಇಂದು ಹಲವಾರು ಉತ್ಪನ್ನಗಳು ತಾವು ಅತ್ಯುತ್ತಮ ಗುಣಮಟ್ಟದವೆಂದು ಹೇಳಿಕೊಂಡರೂ ಆ ನಿಜವಾದ ಗುಣಮಟ್ಟವನ್ನು ನೀಡುವ ಕಂಪೆನಿಗಳು ಕೆಲವೇ ಇವೆ.

ಇಂತಹ ಸಂದರ್ಭದಲ್ಲಿ ಗುಣಮಟ್ಟಕ್ಕೆ ಗ್ಯಾರಂಟಿ ನೀಡುವಂತೆ ಆರಂಭವಾದ ಸಂಸ್ಥೆಯೇ ಎಸ್.ಕೆ.ಸೂಪರ್ ಟಿಎಂಟಿ ಸಂಸ್ಥೆ. ಆರಂಭದಿಂದಲೂ ಉತ್ತಮ ಗುಣಮಟ್ಟದ ಉತ್ಪಾದನೆಗೆ ಹೆಸರುವಾಸಿಯಾದ ಈ ಸಂಸ್ಥೆ ಇದೀಗ ಬ್ರಾಂಡ್ ಟೈಮ್ಸ್ ಬಿಝಿನೆಸ್ ಅವಾರ್ಡ್ಸ್ ವತಿಯಿಂದ 'ಅತಿಹೆಚ್ಚು ನಂಬಲರ್ಹ ಟಿಎಂಟಿ ಸ್ಟೀಲ್ ಬ್ರಾಂಡ್-ಗ್ರಾಹಕರ ಆಯ್ಕೆ' ಎಂಬ ಪ್ರಶಸ್ತಿಯನ್ನೂ ಪಡೆದಿದೆ.

ಈ ಎಸ್‌ಕೆ ಸೂಪರ್ ಟಿಎಂಟಿ ಎಂಬ ಹೆಸರಿನಲ್ಲಿ 'ಎಸ್‌ಕೆ' ಅಂದರೆ ಸ್ಥಾಪಕ ಎಸ್.ಕುಲಂದೈಸಾಮಿ. ಲೋಹದ ಉದ್ಯಮದಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲದ ಪರಿಣತಿ ಇರುವ ಉದ್ಯಮಿ. 1987ರಲ್ಲಿ ಲೋಹದ ವ್ಯಾಪಾರಕ್ಕೆ ತೊಡಗಿಕೊಂಡಾಗ ಗುಣಮಟ್ಟದ ಬಗೆಗೆ ಇವರಲ್ಲಿ ವಿಶೇಷ ಜಾಗೃತಿ ಇತ್ತು. ಇಂದು ಈ ಸಂಸ್ಥೆಯನ್ನು ಅವರ ಪುತ್ರ, ಉದ್ಯಮಿ ಪ್ರಭು ಕುಲಂದೈಸಾಮಿ ಮುನ್ನಡೆಸುತ್ತಿದ್ದಾರೆ. ಸದ್ಯ ಇವರು ಸಂಸ್ಥೆಯ ನಿರ್ವಾಹಕ ನಿರ್ದೇಶಕರಾಗಿದ್ದು ಸಂಸ್ಥೆಯ ಬಿಝಿನೆಸ್ ಅನ್ನು ಅತ್ಯಾಧುನಿಕ ರೀತಿಯಲ್ಲಿ ಮುಂದುವರಿಸುತ್ತಿದ್ದಾರೆ.

2003ರಲ್ಲಿ ತಾವು ಉದ್ಯಮಕ್ಕೆ ಪ್ರವೇಶಿಸಿದಂದಿನಿಂದ ಪ್ರಭು ಅವರು ಟಿಎಂಟಿ ತಯಾರಿಕೆಯಲ್ಲಿ ಗುಣಮಟ್ಟ ಕಾಪಾಡುವಲ್ಲಿ ವಿಶೇಷ ಗಮನ ಹರಿಸಿದರು. ಹೊಸ ಮಷಿನರಿ ಹಾಗೂ ಆಧುನಿಕ ತಂತ್ರಜ್ಞಾನಗಳನ್ನು ತಕ್ಷಣವೇ ಅಳವಡಿಸಿಕೊಂಡರು. ದಾಬಾಸ್‌ಪೇಟ್ ಕೈಗಾರಿಕಾ ಪ್ರದೇಶದಲ್ಲಿ ಜಾಗತಿಕ ಮಟ್ಟದ ಸಲಕರಣೆಗಳುಳ್ಳ ತಯಾರಿಕಾ ಘಟವನ್ನು ಸ್ಥಾಪಿಸಿ ಅಲ್ಲಿ 'ಏಕೀಕೃತ ರೋಲಿಂಗ್ ತಂತ್ರಜ್ಞಾನ'ವನ್ನು ಪರಿಚಯಿಸಿದರು.

SK SUPER TMT
REAL STRONG STEEL

ಟಿಎಂಟಿ ಬಾರ್‌ಗಳ ತಯಾರಿಕೆಯಲ್ಲಿ ಇಂಟಿಗ್ರೇಟೆಡ್ ರೋಲಿಂಗ್ ತಂತ್ರಜ್ಞಾನವು ಅತಿ ಆಧುನಿಕವಾದದ್ದು. ಇದರಲ್ಲಿ ಕಬ್ಬಿಣದ ಅದಿರಿನಿಂದ ನೇರವಾಗಿ ಟಿಎಂಟಿ ಬಾರ್‌ಗಳನ್ನು ಸಿಂಗಲ್ ರೋಲ್‌ನಲ್ಲಿ ತಯಾರಿಸಲಾಗುವುದು. ಇದರಿಂದಾಗಿ ಸ್ಟೀಲ್‌ನ ಗುಣಮಟ್ಟವೂ ಅತ್ಯುತ್ತಮವಾಗಿದ್ದು ಪರಿಪೂರ್ಣ ರಾಸಾಯನಿಕ ಮತ್ತು ಭೌತಿಕ ಗುಣಮಟ್ಟವನ್ನು ಹೊಂದಿರುತ್ತದೆ. ಇದರಿಂದ ಗುಣಮಟ್ಟ ಹಾಗೂ ಬಾಳಿಕೆಯ ಪರೀಕ್ಷೆಯಲ್ಲೂ ಇದು ಗೆದ್ದಿದೆ. ಗುಣಮಟ್ಟದ ಉತ್ಪನ್ನಗಳು ಹಾಗೂ ವಿಸ್ತರಿಸುತ್ತಿರುವ ವ್ಯಾವಹಾರಿಕ ಪಾಲುದಾರರ ಜಾಲದಿಂದಾಗಿ ಗ್ರಾಹಕರು ತಮ್ಮ ಕನಸಿನ ಮನೆ ನಿರ್ಮಾಣದ ವೇಳೆ ಇದನ್ನೇ ಆಯ್ಕೆ ಮಾಡುವಂತಾಗಿದೆ. 'ಗುಣಮಟ್ಟದ ಉತ್ಪನ್ನ ಕೊಡುವ ನಮ್ಮ ಗುರಿಯಿಂದಾಗಿ ನಾವು ಮಾರುಕಟ್ಟೆಯಲ್ಲಿ ಎಲ್ಲರೂ ಬಯಸುವ ಬ್ರಾಂಡ್ ಆಗಿದ್ದೇವೆ ಮತ್ತು ನಮ್ಮ ಉತ್ಪನ್ನವನ್ನು ಬಯಸುವ ಸಂತೃಪ್ತ ಗ್ರಾಹಕರ ಸಂಖ್ಯೆ ಹೆಚ್ಚಿದೆ. ಎಸ್ ಕೆ ಸೂಪರ್ ಟಿಎಂಟಿ ಸಂಸ್ಥೆಯು ಗುಣಮಟ್ಟಕ್ಕೆ ಸದಾ ಆದ್ಯತೆ ನೀಡುತ್ತದೆ ಮತ್ತು ಎಂದೆಂದೂ ಅದಕ್ಕೆ ಬದ್ಧವಾಗಿರುತ್ತದೆ' ಎನ್ನುತ್ತಾರೆ ಪ್ರಭು.

**ಜನರಿಗೆ ಅತ್ಯುತ್ತಮ ಗುಣಮಟ್ಟ ಕೊಡಬೇಕೆಂಬ ಟಿಎಂಟಿ ಕಂಬಿ ಕೊಡಬೇಕೆಂಬ ಉದ್ದೇಶದಿಂದ ಈ ಸಂಸ್ಥೆ ಆರಂಭವಾಯಿತು. ಅದಕ್ಕಾಗಿ ಇಂಟಿಗ್ರೇಟೆಡ್ ರೋಲಿಂಗ್ ತಂತ್ರಜ್ಞಾನವನ್ನು ಬಳಸಿ ಟಿಎಂಟಿ ಕಂಬಿ ತಯಾರಿಸಲಾಗುತ್ತಿದೆ. ಈ ಕಂಬಿಗಳ ಬಳಕೆಯಿಂದ ನಿರ್ಮಿಸಿರುವ ಮನೆಗಳಿಗೆ ದೀರ್ಘಬಾಳಿಕೆಯ ಭರವಸೆ ಕೊಡುವುದು ನಮ್ಮಿಂದ ಸಾಧ್ಯವಾಗಿದೆ. ಮುಂದೆಯೂ ಗುಣಮಟ್ಟದಲ್ಲಿ ನಾವೆಂದೂ ರಾಜಿಯಾಗುವುದಿಲ್ಲ.**

**-ಪ್ರಭು ಕುಲಂದೈಸಾಮಿ, ನಿರ್ವಾಹಕ ನಿರ್ದೇಶಕರು, ಎಸ್ ಕೆ ಸೂಪರ್ ಟಿಎಂಟಿ.**




Pure | Perfect | Precise

